## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –2 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಗುಂಡಪ್ಪ |
| ತಂದೆಃ ಗಂಡ | ಃ | ಅರ್ಜುನ |
| ವಯಸ್ಸು | ಃ | ೫೦ ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ೧೩.೦೨.೨೦೨೨

ಸತ್ಯ ಪ್ರತಿಜ್ಞೆಯ ಮೇರೆಗೆ

---

## ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಸಹೋದರಿ, ಚಾಸಾ-4 ನನ್ನ ಚಿಕ್ಕಮ್ಮ, ಚಾಸಾ-5 ನನ್ನ ಚಿಕ್ಕಪ್ಪ, ಚಾಸಾ-6 ನನ್ನ ಚಿಕ್ಕಮ್ಮ, ಚಾಸಾ-7, 8 ಮತ್ತು 10 ರವರು ನನ್ನ ಸಹೋದರರು, ಚಾಸಾ-9 ನನ್ನ ಧರ್ಮ ಪತ್ನಿ, ಚಾಸಾ-11 ರವರ ಪರಿಚಯ ಇದೆ.

ದಿ. 10.09.2016 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದು ನನ್ನನ್ನು ಕರೆದರು, ನಾನು ಅವರಿಗೆ ಜಗಳದ ಕುರಿತು ವಿವರಿಸಿದೆನು. ಪಂಚನಾಮೆಯನ್ನು ಜರುಗಿಸಿ ಒಂದು ರಾಡನ್ನು ನನ್ನ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತಾರೆ. ಬೆಳಿಗ್ಗೆ 10 ಗಂಟೆಯಿಂದ 11 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಎಂದು, ಸಹಿಯನ್ನು ನಿಪಿ-೨(ಎ) ಎಂದು ಗುರುತಿಸಲಾಯಿತು. ಮು.ಮಾ-೧ ನ್ನು ನೋಡಿ ಗುರುತಿಸಿರುತ್ತಾರೆ.

## ಪಾ. ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಅಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂಧರೆ ಸರಿ ಅಲ್ಲ. ಪಂಚನಾಮೆ ಕಾಲಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವನ್ನು ಪೋಲಿಸರಿಗೆ ನಾನೇ ತೋರಿಸಿರುತ್ತೇನೆ. ಸಾಕ್ಷಿಗೆ ಮು.ಮಾ.-೧ನ್ನು ತೋರಿಸಿ ಅದಕ್ಕೆ ಯಾವುದೇ ರೀತಿಯಾದ ರಕ್ತ ಹತ್ತಿದ ಕಲೆಗಳು ಇಲ್ಲ ಎಂದು ಕೇಳಿದಾಗ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮು.ಮಾ.-೧ ರಂತಹ ವಸ್ತುಗಳು ಹೊಸದಾಗಿ ಕಟ್ಟಡ ಮಾಡುತ್ತಿರುವ ಸ್ಥಳದಲ್ಲಿ ಸಿಗುತ್ತವೆ ಎಂದರೆ ಸರಿ. ಸಾಕ್ಷಿಗೆ ಮು.ಮಾ.-೧ ನ್ನು ತೋರಿಸಿ ಇದು ಸರಳು ಎನ್ನುತ್ತಾರೆ ಎಂದರೆ ಸಾಕ್ಷಿಯು ಸರಳು ಮತ್ತು ರಾಡು ಎರಡನ್ನು ಹೇಳುತ್ತೇವೆ ಎಂದು ನುಡಿಯುತ್ತಾರೆ. ಸರಳು ಎಂಧರೆ ಸಣ್ಣಗೆ ಇರುತ್ತದೆ ರಾಡು ಎಂದರೆ ದಿಬ್ಬ ಇರುತ್ತದೆ ಎಂದು ಸಾಕ್ಷಿಗೆ ಕೇಳಿದಾಗ ಸಾಕ್ಷಿಯು ಮು.ಮಾ.-೧ಕ್ಕೆ ರಾಡು ಎನ್ನುತ್ತೇವೆ

ಎಂದು ನುಡಿಯುತ್ತಾರೆ. ಮು.ಮಾ.-೧ನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂಧರೆ ಸರಿ ಅಲ್ಲ. ಮು.ಮಾ.-೧ನ್ನು ಪಂಚನಾಮೆ ಕಾಲಕ್ಕೆ ಪೋಲಿಸರು ಸ್ಥಳದಿಂದ ಜಪ್ತಿಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೧ ನನ್ನ ಸಹೋದರಿಯಾದ ಕಾರಣ ಪಂಚನಾಮೆ ಕಾಲಕ್ಕೆ ನಾನು ಇರದಿದ್ದರೂ ನನ್ನ ಸಮಕ್ಷಮ ಪಂಚನಾಮೆ ಜರುಗಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ. ಆಳಂದ.